## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 874
ಉತ್ತರಿಸಬೇಕಾದ ದಿನಾಂಕ : 23.02.2024
ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಾಸಿಕ ಪಿಂಚಣಿಗಾಗಿ 60 ವರ್ಷ ಮೇಲ್ಪಟ್ಟವರು ಸಂಧ್ಯಾ ಸುರಕ್ಷಾ ಯೋಜನೆಯಡಿ ಅರ್ಜಿ ಸಲ್ಲಿಸುವಾಗ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವುದನ್ನು ಹೊಸದಾಗಿ ಕಡ್ಡಾಯ ಮಾಡಲಾಗಿದೆಯೇ: | ಈ ಹಿಂದಿನಿಂದಲೇ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ. |
| ಆ) | ಆಧಾರ್ ಸಂಖ್ಯೆಯನ್ನು ಜೋಡನೆ ಮಾಡುವುದನ್ನು ಹೊಸದಾಗಿ ಕಡ್ಡಾಯ ಮಾಡಿರುವುದರಿಂದ ಹೊಸ ವ್ಯವಸ್ಥೆಯಲ್ಲಿ 32 ಸಾವಿರ ರೂ. ಗಿಂತ ಹೆಚ್ಚಿನ ಆದಾಯ ಹೊಂದಿರುವವರ ಅರ್ಜಿಗಳು ತಿರಸ್ಕೃತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಾಮಾಜಿಕ ಭದ್ರತಾ ಯೋಜನೆಯಡಿ ಕೆಳಕಂಡ ಮಾನದಂಡಗಳನ್ವಯ ಫಲಾನುಭವಿಗಳು ಸಂಧ್ಯಾ ಸುರಕ್ಷಾ ಯೋಜನೆಯಡಿ ಪಿಂಚಣಿಯನ್ನು ಪಡೆಯಲು ಅರ್ಹರಿರುತ್ತಾರೆ.<br><br>• ಸರ್ಕಾರದ ಆದೇಶ ಸಂಖ್ಯೆ ಕಂಇ 85 ಡಿ ಎಸ್ ಪಿ 2011 , ದಿನಾಂಕ: 21.06.2011 ರಲ್ಲಿ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ರೂ 12000 ಮತ್ತು ನಗರ ಪ್ರದೇಶಗಳಲ್ಲಿ ರೂ 17000 ಗಳಿಗೆ ನಿಗಧಿಪಡಿಸಿದ್ದು , ಸದರಿ ಆದೇಶವನ್ನು ಪರಿಷ್ಕರಿಸಿ DSSP/MISC-05/2020 ದಿನಾಂಕ:10.02.2021 ರಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಮಂಜೂರಾತಿ ಪಡೆಯಲು ಕುಟುಂಬದ ವಾರ್ಷಿಕ ಆದಾಯ ರೂ 32000/- ಗಳಿಗೆ ಮಿತಿಗೊಳಿಸಲಾಗಿದೆ.<br>• ಸದರಿ ಯೋಜನೆಯಡಿ ಫಲಾನುಭವಿಗಳನ್ನು ಈ ಕೆಳಕಂಡ ವರ್ಗಗಳಿಂದ ಆಯ್ಕೆ ಮಾಡಲಾಗುತ್ತದೆ<br><br>1. ಸಣ್ಣ ರೈತರು,<br>2. ಅತೀ ಸಣ್ಣ ರೈತರು,<br>3. ಕೃಷಿ ಕಾರ್ಮಿಕರು,<br>4. ನೇಕಾರರು<br>5. ಮೀನುಗಾರರು<br><br>• ಫಲಾನುಭವಿಗಳ ಪತ್ನಿ ಅಥವಾ ಪತಿಯ ಸಂಯೋಜಿತ ಠೇವಣಿಗಳ ಒಟ್ಟು ಮೌಲ್ಯವು ರೂ 10000/-ಗಳಿಗಿಂತ ಹೆಚ್ಚಾಗಿರಬಾರದು. |

| | | |
|---|---|---|
| ಇ) | ಬಂದಿದ್ದಲ್ಲಿ , ಸದರಿ ನಿಯಮವು ಅವೈಜ್ಞಾನಿಕವಾಗಿದ್ದು, ಸಂಧ್ಯಾ ಕಾಲದಲ್ಲಿ ಪಿಂಚಣಿಯ ಆಸರೆ ಬಯಸುವ ವೃದ್ಧರಿಗೆ ಮಾರಕವಾಗಿರುವ ಕಾರಣ ಈ ಹೊಸ ನಿಯಮವನ್ನು ಬದಲಾವಣೆ ಮಾಡಲು ಸರ್ಕಾರ ಈ ಕೂಡಲೇ ಕ್ರಮ ವಹಿಸುವುದೇ: | ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಸಾಮಾಜಿಕ ಭದ್ರತಾ ಯೋಜನೆಯಡಿ ಆದಾಯ ಮಿತಿಗೆ ಒಳಪಟ್ಟು ಅರ್ಜಿಯನ್ನು ಸ್ವೀಕರಿಸಲು ತಂತ್ರಾಂಶ ಅಭಿವೃದ್ಧಿ ಪಡಿಸಲು ಶಿಫಾರಸ್ಸು ಮಾಡಲಾಗಿರುತ್ತದೆ.<br><br>ಅದರಂತೆ ಪ್ರಸ್ತುತ ನಾಡ ಕಛೇರಿ ತಂತ್ರಾಂಶ-5 ರಲ್ಲಿ ಕುಟುಂಬ ದತ್ತಾಂಶದಲ್ಲಿನ ಮಾಹಿತಿಯೊಂದಿಗೆ ಅನುಕಲನೆ ಮುಖಾಂತರ ಆಧಾರ್ ಸಂಖ್ಯೆ ಆಧರಿಸಿ ಆದಾಯ ಪ್ರಮಾಣ ಪತ್ರದಲ್ಲಿನ ಮಾಹಿತಿಯನ್ನು ಪಡೆಯಲಾಗುತ್ತಿದ್ದು, ಪಿಂಚಣಿ ನಿಯಮಗಳಿಗೆ ಅನುಗುಣವಾಗಿ ಕುಟುಂಬದ ವಾರ್ಷಿಕ ಆದಾಯ ರೂ.32000/-ಗಳಿಗಿಂತ ಕಡಿಮೆಯಿರುವ ಫಲಾನುಭವಿಗಳು ಮಾತ್ರ ಪಿಂಚಣಿ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ.<br><br>ಸದರಿ ಯೋಜನೆಗೆ ಸಂಬಂಧಿಸಿದ ಮೇಲಿನ ನಿಯಮಗಳು ಕಾನೂನು ಬದ್ಧವಾಗಿ ರೂಪಿತವಾಗಿರುವುದರಿಂದ ಮತ್ತು ಸಾಮಾಜಿಕ ಭದ್ರತಾ ಮಾನದಂಡಗಳಿಗೆ ಅನುಗುಣವಾಗಿ ಅರ್ಜಿಯನ್ನು ಸ್ವೀಕರಿಸುತ್ತಿರುವುದರಿಂದ ಯಾವುದೇ ರೀತಿಯ ಸಮಸ್ಯೆಗಳಿಗೆ ಅನುವಾಗದಂತೆ ಸಂಧ್ಯಾ ಸುರಕ್ಷಾ ಯೋಜನೆಯಡಿ ನಿಗಧಿತ ಆದಾಯ ಮಿತಿಗೊಳಪಟ್ಟು ಪಿಂಚಣಿ ಅರ್ಜಿ ಸ್ವೀಕರಿಸಿ ಅರ್ಹ ಫಲಾನುಭಗಳಿಗೆ ಮಂಜೂರಾತಿ ನೀಡಲಾಗುತ್ತಿದೆ. |
| ಈ) | ಯಾವ ಕಾಲಮಿತಿಯೊಳಗೆ ಸರ್ಕಾರ ಸಂಧ್ಯಾಕಾಲದಲ್ಲಿ ಪಿಂಚಣಿಯ ಆಸರೆ ಬಯಸುವ ವೃದ್ಧರಿಗೆ ಮಾರಕವಾಗಿರುವ ಈ ಹೊಸ ನಿಯಮವನ್ನು ಬದಲಾವಣೆ ಮಾಡುವುದು? | ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

**ಕಡತ ಸಂಖ್ಯೆ:ಆರ್‌ಡಿ 42 ಕೆಎಟಿ ಎಸ್‌ಎಸ್‌ಪಿ 2024**

**( ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**